**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:– 246/2023**

| | | | |
|---|---|---|---|
| **ಸಾಕ್ಷಿದಾರನ ಹೆಸರು** | : ಅನಿಲ್ ಕುಮಾರ್ ಎನ್ | | **ಪಿ.ಡಬ್ಲ್ಯೂ:**– 19 |
| **ತಂದೆಯ ಹೆಸರು** | : ನಾಗಸುಂದರ್ ಎಸ್. | | **ಸಿ.ಡಬ್ಲ್ಯೂ:**– 33 |
| **ವಯಸ್ಸು** | : 37 ವರ್ಷ | | |
| **ಉದ್ಯೋಗ** | : ಪಿ.ಎಸ್.ಐ ಸಿಸಿಬಿ, ಮೈಸೂರು | | |
| **ವಾಸಸ್ಥಳ** | : ಮೈಸೂರು | | |

**ಸಾಕ್ಷಿಯನ್ನು ಈ ದಿನ ದಿ:12.02.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಅಭಿಯೋಜಕರಿಂದ:-**

1. ದಿ:– 30.01.2023 ರಿಂದ 10.06.2023 ರವರೆಗೆ ಮಂಡಿ ಪೊಲೀಸ್ ಠಾಣೆಯಲ್ಲಿ ಪಿಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ:– 30.01.2023 ರಂದು ಸದರಿ ಪ್ರಕರಣದ ಕಡತವನ್ನು ಚಾ.ಸಾ:32 ರವರಿಂದ ಪಡೆದು ತನಿಖೆಯನ್ನು ಕೈಗೊಂಡಿರುತ್ತೇನೆ.

3. ದಿ:–01.02.2023 ರಂದು ಕೆ.ಆರ್ ಆಸ್ಪತ್ರೆಯ ವೈದ್ಯಾಧಿಕಾರಿಯಾದ ಚಾ.ಸಾ:24 ಡಾ. ಶಿಲ್ಪರವರು ಗಾಯಾಳು ಸುರೇಶ್ ರವರ ಗಾಯದ ಪ್ರಮಾಣ ಪತ್ರವನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಗಾಯದ ಪ್ರಮಾಣ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–23 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–23(ಬಿ) ಎಂದು ಗುರುತಿಸಲಾಯಿತು.

**4.** ದಿಃ– **03.02.2023** ರಂದು ವೈದ್ಯಾಧಿಕಾರಿಗಳು, ಕೆ.ಆರ್ ಆಸ್ಪತ್ರೆಯವರಿಗೆ ಗಾಯಾಳುವಿಗೆ ಉಂಟಾದ ಗಾಯಗಳು ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿರುವ ಕಬ್ಬಿಣದ ಚಾಕು, ಸ್ಟಿಕ್ಕರ್ ಕಟ್ಟಿಂಗ್ ಬ್ಲೇಡಿನಿಂದ ಹಲ್ಲೆ ಮಾಡಿದರೆ ಗಾಯ ಉಂಟಾಗುವ ಸಾಧ್ಯತೆ ಇರುವ ಬಗ್ಗೆ ಅಭಿಪ್ರಾಯ ನೀಡಲು ಮನವಿ ಸಲ್ಲಿಸಿಕೊಂಡಿರುತ್ತೇನೆ. ಮನವಿ ಪತ್ರದ ಜೊತೆಗೆ ಗಾಯಾಳುವಿನ ಗಾಯದ ಪ್ರಮಾಣ ಪತ್ರ, ಆಯುಧಗಳನ್ನು ಸಲ್ಲಿಸಿಕೊಂಡಿರುತ್ತೇನೆ. ಸದರಿ ಆಯುಧಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಮು.ಮಾಃ–**12** ಮತ್ತು **13** ನ್ನು ನೋಡಿ ಗುರುತಿಸಿರುತ್ತಾರೆ.

**5.** ದಿಃ– **07.02.2023** ರಂದು ವೈದ್ಯಾಧಿಕಾರಿಗಳಾದ ಚಾ.ಸಾಃ**24** ರವರು ವರದಿಯನ್ನು ನೀಡಿದ್ದು, ತಮ್ಮ ವರದಿಯಲ್ಲಿ ಅಮಾನತ್ತುಪಡಿಸಿಕೊಂಡಿರುವ ಕಬ್ಬಿಣದ ಚಾಕು ಮತ್ತು ಸ್ಟಿಕ್ಕರ್ ಕಟರ್ ಬ್ಲೇಡಿನಿಂದ ಗಾಯಾಳುವಿನ ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ ಗಾಯಗಳು ಸದರಿ ಆಯುಧಗಳಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆ ಇರುತ್ತದೆ ಎಂದು ಮತ್ತು ಗಾಯದ ಸ್ವರೂಪಗಳನ್ನು ನಮೂದಿಸಿ ಅಭಿಪ್ರಾಯವನ್ನು ನೀಡಿರುತ್ತಾರೆ. ಅಭಿಪ್ರಾಯದ ಜೊತೆಗೆ ವಸ್ತುಗಳನ್ನು ಮತ್ತೆ ಸೀಲ್ ಮಾಡಿ ಕಳುಹಿಸಿಕೊಟ್ಟಿರುತ್ತಾರೆ. ಸಾಕ್ಷಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–**25** ಎಂದು ಗುರುತಿಸಲಾಗಿರುತ್ತದೆ.

**6.** ಅದೇ ದಿನ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಸಹಾಯಕ ಕಾರ್ಯಪಾಲಕ ಅಭಿಯಂತರರು, ಪಿಡಬ್ಲ್ಯೂಡಿ ಇಲಾಖೆಯವರಿಗೆ ಮನವಿಯನ್ನು ಸಲ್ಲಿಸಿರುತ್ತೇನೆ.

**7.** ದಿಃ- **08.02.2023** ರಂದು ಆರ್.ಟಿ.ಒ ಇಲಾಖೆಯಿಂದ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡಿದ್ದ ಆಟೋ ನಂಬರ್ ಕೆಎಃ-**05** ಬಿಃ**5019** ವಾಹನದ ಬಿ ಎಕ್ಸ್ ಟ್ರ್ಯಾಕ್ಟನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಬಿ ಎಕ್ಸ್ ಟ್ರ್ಯಾಕ್ಟನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ-**34** ಎಂದು ಗುರುತಿಸಲಾಯಿತು.

**8.** ದಿಃ- **20.02.2023** ರಂದು ಪ್ರಕರಣದ ಸಾಕ್ಷಿದಾರರಾದ ಚಾ.ಸಾಃ**17** ರಿಂದ **19** ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

**9.** ದಿಃ- **13.03.2023** ರಂದು ಈ ಪ್ರಕರಣದಲ್ಲಿ ತನಿಖೆಯನ್ನು ಪೂರ್ಣಗೊಳಿಸಿ ಆರೋಪಿತರ ವಿರುದ್ಧ ಆರೋಪ ಸಾಬೀತಾದ್ದರಿಂದ **1** ರಿಂದ **3** ನೇ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ದೋಷಾರೋಪಣಾ ಸಲ್ಲಿಸುವಾಗ ಪ್ರಕರಣದಲ್ಲಿ ಕಲಂ **326** ಐಪಿಸಿ ಅಡಿಯ ಅಪರಾದ ಎಸಗಿರುವ ಬಗ್ಗೆ ಕಂಡು ಬಂದಿದ್ದು, ಅದನ್ನು ದೋಷಾರೋಪಣಾ ಪಟ್ಟಿಯಲ್ಲಿ ಸೇರಿಸಿಕೊಂಡಿರುತ್ತೇನೆ.

**10.** ದಿಃ- **23.03.2023** ರಂದು ಮೊಹಮ್ಮದ್ ಅಯೂಬ್, ಸಹಾಯಕ ಅಭಿಯಂತರರು, ಪಿಡಬ್ಲ್ಯೂಡಿ, ಮೈಸೂರುರವರು ಕೃತ್ಯ ನಡೆದ ಸ್ಥಳದ ನಕಾಶೆಯನ್ನು ನೀಡಿದ್ದು, ಅದನ್ನು ಪಡೆದುಕೊಂಡು ದಿಃ-**24.03.2023** ರಂದು ಸದರಿ ದಾಖಲಾತಿಯನ್ನು ದೋಷಾರೋಪಣಾ ಪತ್ರಕ್ಕೆ ಅಳವಡಿಸಿಕೊಂಡು ಮತ್ತು ಮೊಹಮ್ಮದ್ ಅಯೂಬ್ ರವರನ್ನು ಹೆಚ್ಚುವರಿ ಸಾಕ್ಷಿಯಾಗಿ ಪರಿಗಣಿಸಲು ಕೋರಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು

ನಿಶಾನೆ ಪಿ–35 ಎಂದು ಗುರುತಿಸಲಾಯಿತು. **FSL** ವರದಿ ಇನ್ನು ಕೂಡ **FSL** ನಿಂದ ಬಂದಿರುವುದಿಲ್ಲ. ಹಾಗಾಗಿ ಅದನ್ನು ಮುಂದಿನ ದಿನಗಳಲ್ಲಿ ಸಲ್ಲಿಸುತ್ತೇನೆ. ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

**<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ವಕೀಲರಿಂದಃ–</u>**

**11.** ಗಾಯದ ಪ್ರಮಾಣ ಪತ್ರದಲ್ಲಿ 5 ರಿಂದ 6 ಜನ ಹಲ್ಲೆ ಮಾಡಿರುತ್ತಾರೆ ಎಂದು ನಮೂದಿಸಲಾಗಿರುತ್ತದೆ. ಸದರಿ 6 ಜನ ಯಾರು ಎಂದು ತನಿಖೆ ಮಾಡಿರುತ್ತೀರಿಯೇ? ಎಂದರೆ ಸಾಕ್ಷಿಯು ಸಿಸಿಟಿವಿ ದೃಶ್ಯಾವಳಿಗಳಲ್ಲಿ 3 ಜನ ಕಂಡುಬಂದಿದ್ದು, ಸಾಕ್ಷಿದಾರರ ಹೇಳಿಕೆಯಲ್ಲಿಯೂ ಸಹ 3 ಜನ ಇದ್ದ ಬಗ್ಗೆ ತಿಳಿದು ಬಂದಿದ್ದು, ಹಾಗಾಗಿ 3 ಜನರ ವಿರುದ್ಧ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ.

**12.** ನಾನು 3 ಜನರು ಇರುವ ಬಗ್ಗೆ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿಕೂಂಡಿರುತ್ತೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಸಿಸಿಟಿವಿ ದೃಶ್ಯಾವಳಿಗಳಲ್ಲಿ 3 ಜನರು ಕಂಡು ಬಂದರು ಎಂದು ಹೇಳುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಆ ರೀತಿ ಯಾವುದೇ ಸಿಸಿಟಿವಿ ದೃಶ್ಯಾವಳಿಗಳನ್ನು ಪರಿಶೀಲಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಿಸಿಟಿವಿ ದೃಶ್ಯಾವಳಿಗಳನ್ನು ಪ್ರಕರಣಕೋಸ್ಕರ ಸೃಷ್ಟಿ ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ.

**13.** ವೈದ್ಯಾಧಿಕಾರಿಯವರಿಗೆ ಹೆಚ್ಚುವರಿ ಅಭಿಪ್ರಾಯಕ್ಕೆ ಸಲ್ಲಿಸಿದ ಮನವಿ ಪತ್ರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ವೈದ್ಯಾಧಿಕಾರಿಯವರಿಗೆ ಈ ಪ್ರಕರಣದ ಬಗ್ಗೆ ಚರ್ಚಿಸಿರುತ್ತೇನೆ ಎಂದರೆ ಸರಿ. ನಾನು ವೈದ್ಯಾಧಿಕಾರಿಯವರಿಗೆ ಹೆಚ್ಚಿನ ಅಭಿಪ್ರಾಯಕ್ಕೆ

ಮನವಿ ಸಲ್ಲಿಸಿಕೊಂಡಿರುವುದಿಲ್ಲ ಮತ್ತು ಅಮಾನತ್ತುಪಡಿಸಿಕೊಂಡಿರುತ್ತೇನೆ ಎಂದು ಹೇಳುವ ಯಾವುದೇ ಆಯುಧಗಳನ್ನು ಮನವಿ ಪತ್ರದ ಜೊತೆಗೆ ಸಲ್ಲಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ವೈದ್ಯಾಧಿಕಾರಿಯವರ ಮುಂದೆ ಇದೇ ರೀತಿ ಅಭಿಪ್ರಾಯ ನೀಡುವಂತೆ ಒತ್ತಡ ಹೇರಿ ಅಭಿಪ್ರಾಯವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ.

**14.** ಗಾಯದ ಪ್ರಮಾಣ ಪತ್ರದಲ್ಲಿ ಯಾವುದೇ ಮಾರಣಾಂತಿಕ ಗಾಯಗಳಾದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸಾಕ್ಷಿಯು ತೀವ್ರ ಸ್ವರೂಪದ ಗಾಯಗಳು ಮತ್ತು ರಕ್ತಸ್ರಾವದ ಗಾಯಗಳು ಎಂದು ನಮೂದಿಸಿರುತ್ತಾರೆ ಎಂದು ನುಡಿಯುತ್ತಾರೆ.

**15.** ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿ ನೀಡುವಂತೆ ಸಲ್ಲಿಸಿದ ಮನವಿಪತ್ರ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ ಎಂದರೆ ಸರಿ. ನಕಾಶೆಯನ್ನು ಪ್ರಕರಣಕೋಸ್ಕರ ತಯಾರಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

**16.** ಬಿ ಎಕ್ಸ್ ಟ್ರ್ಯಾಕ್ಟನಲ್ಲಿ ಕೇವಲ ಜಯಮ್ಮರವರ ಹೆಸರಿದ್ದು, ಇರ್ಪಾನ್ ಪಾಷ ಮತ್ತು ಸಲೀಂ ರವರ ಹೆಸರು ಇದ್ದ ಬಗ್ಗೆ ಕಂಡು ಬಂದಿರುವುದಿಲ್ಲ ಎಂದರೆ ಸಾಕ್ಷಿಯು ಜಯಮ್ಮರವರ ಹೆಸರಿನಲ್ಲಿದ್ದು, ಅದನ್ನು ಇರ್ಪಾನ್ ಪಾಷರವರಿಗೆ ಮಾರಾಟ ಮಾಡಿರುತ್ತಾರೆ, ಆದರೆ ಹೆಸರು ಬದಲಾವಣೆ ಮಾಡಿಕೊಂಡಿರುವುದಿಲ್ಲ ಎಂದು ನುಯುತ್ತಾರೆ. ನಂತರ ಇರ್ಪಾನ್ ಪಾಷ, ಸಲೀಂ ರವರಿಗೆ ಮಾರಾಟ ಮಾಡಿದ್ದು, ನಂತರ ಸಲೀಂ ಆಟೋವನ್ನು 1 ನೇ ಆರೋಪಿಗೆ ಮಾರಾಟ ಮಾಡಿದ್ದು, ಅದಕ್ಕೆ ಸಂಬಂಧಪಟ್ಟ ಡೆಲಿವರಿ ನೋಟನ್ನು ಹಾಜರುಪಡಿಸಿರುತ್ತೇನೆ. ಜಯಮ್ಮರವರಿಂದ ಇರ್ಪಾನ್ ಪಾಷ ಮತ್ತು ಇರ್ಪಾನ್ ಪಾಷರವರಿಂದ ಸಲೀಂ ರವರಿಗೆ ಆಟೋ ಮಾರಾಟವಾದ ಬಗ್ಗೆ

ಯಾವುದೇ ಡೆಲಿವರಿ ನೋಟನ್ನು ಸಂಗ್ರಹಿಸಿರುವುದಿಲ್ಲ ಮತ್ತು ಹಾಜರುಪಡಿಸಿರುವುದಿಲ್ಲ ಎಂದರೆ ಸಾಕ್ಷಿಯು ಜಯಮ್ಮರವರಿಂದ ಇರ್ಫಾನ್ ಪಾಷರವರಿಗೆ ಮಾರಾಟವಾದ ಬಗ್ಗೆ ದಾಖಲೆ ಇರುವುದಿಲ್ಲ. ಆದರೆ ಇರ್ಫಾನ್ ಪಾಷರವರಿಂದ ಸಲೀಂ ಅಲಿಗೆ ಮಾರಾಟ ಮಾಡಿದ ಬಗ್ಗೆ ಡೆಲಿವರಿ ನೋಟ್ ಇರುತ್ತದೆ ಎಂದು ನುಡಿಯುತ್ತಾರೆ.

**17.** ಸಲೀಂ 1 ನೇ ಆರೋಪಿಗೆ ಆಟೋವನ್ನು ಮಾರಾಟ ಮಾಡಿರುವುದಿಲ್ಲ, ಅದಕ್ಕೆ ಸಂಬಂಧಪಟ್ಟ ಡೆಲಿವರಿ ನೋಟನ್ನು ಸೃಷ್ಟಿ ಮಾಡಲಾಗಿದ್ದು, ಸಲೀಂ ಸದರಿ ಆಟೋದ ಮಾಲೀಕನಾಗಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಇರ್ಫಾನ್ ಪಾಷ ಸಲೀಂರವರಿಗೆ ಮಾರಾಟ ಮಾಡಲು ಆತ ಮಾಲೀಕನಾಗಿರುವುದಿಲ್ಲ, ಮಾರಾಟ ಮಾಡಲು ಆತನಿಗೆ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ.

**18.** 1 ನೇ ಆರೋಪಿಯನ್ನು ಪ್ರಕರಣದಲ್ಲಿ ಸಿಲುಕಿಸಲು ದಾಖಲೆಗಳನ್ನು ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಲೀಂನಿಂದ 1 ನೇ ಆರೋಪಿಗೆ ಮಾರಾಟವಾದ ಬಗ್ಗೆ ಡೆಲಿವರಿ ನೋಟಿಗೂ ಮತ್ತು 1 ನೇ ಆರೋಪಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಆರೋಪಿಗೂ ಮತ್ತು ಪ್ರಕರಣದಲ್ಲಿಯ ಆಟೋಗೂ ಮತ್ತು ಆಟೋದ ಬಿ ಎಕ್ಸ್ ಟ್ರ್ಯಾಕ್ಟಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಸದರಿ ಆಟೋಗೆ ಮತ್ತು ಆರೋಪಿತರಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ.

**19.** 1 ಮತ್ತು 2 ನೇ ಆರೋಪಿತರಿಗೂ ಮತ್ತು ದೂರುದಾರನಿಗೆ ಗಾಯಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಮತ್ತು 1 ಮತ್ತು 2 ನೇ ಆರೋಪಿತರನ್ನು ಪ್ರಕರಣದಲ್ಲಿ

ಸಿಲುಕಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ತನಿಖಾ ಕಾಲದಲ್ಲಿ 1 ಮತ್ತು 2 ನೇ ಆರೋಪಿತರು ಯಾವುದೇ ಕೃತ್ಯ ಎಸಗಿರುವುದಿಲ್ಲ, ಅದಕ್ಕೆ ಯಾವುದೇ ಸಾಕ್ಷ್ಯ ದೊರಕಿರುವುದಿಲ್ಲ, ಆದರೂ ಸಹ ಅವರ ವಿರುದ್ದ ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ– ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**

**ಮೈಸೂರು.**